# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 166 | Pages. 2 | Date: 07-05-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 166 - ಪುಟಗಳು : 2 - 07 ಮೇ 2025 ಬುಧವಾರ Ph: 8762954248 ದರ : ₹1


# ರಸಗೊಬ್ಬರ, ಬಿತ್ತನೆ ಬೀಜಕ್ಕೆ ಕೊರತೆಯಾಗದಿರಲಿ

## ದಿಶಾ ಸಮಿತಿ ಸಭೆಯಲ್ಲಿ ಸಂಸದರ ನಿರ್ದೇಶನ ವಿವಿಧ ಇಲಾಖೆ ಪ್ರಗತಿ ಪರಿಶೀಲನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು ಬಿತ್ತನೆ ಬೀಜ ಹಾಗೂ ರಸಗೊಬ್ಬರಕ್ಕೆ ಯಾವ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವ ' ು ು ಂ ಗ ಾ ರ ' ು ಆರಂಭವಾಗುತ್ತಿದ್ದು, ಕೃಷಿ ಇಲಾಖೆಯಲ್ಲಿ ನಿಗದಿತ ಗುರಿ ಸಾಧಿಸಬೇಕು. ರಸಗೊಬ್ಬರ, ಬಿತ್ತನೆ ಬೀಜ ಪೂರೈಕೆಯಲ್ಲಿ ರೈತರಿಗೆ ಯಾವುದೇ ತೊಂದರೆ ಆಗಬಾರದು ಎಂದರು.

ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ತೆಂಗಿಗೆ ಕಪ್ಪುತಲೆ ಹುಳ ರೋಗ ಕಾಣಿಸಿಕೊಂಡಿದ್ದು, ಇದರ ನಿಯಂತ್ರಣಕ್ಕೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.



### ಹೆರಿಗೆಗೆ ಹಣ ಕೇಳುತ್ತೀರಿ

ಕೆಲವು ಆಸ್ಪತ್ರೆಗಳಲ್ಲಿ ರಾತ್ರಿ ವೇಳೆ ಹೆರಿಗೆ ಮಾಡಲು ವೈದ್ಯರೇ ಇರುವುದಿಲ್ಲ ಎಂಬ ಆರೋಪದ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಂಸದ ಶ್ರೇಯಸ್ ಪಟೇಲ್, ಈ ರೀತಿಯ ಸನ್ನಿವೇಶ ಮರುಕಳಿಸಬಾರದು ಎಂದು ಎಚ್ಚರಿಸಿದರು. ತಾಲ್ಲೂಕು ಆಸ್ಪತ್ರೆಗಳಲ್ಲಿ ರಾತ್ರಿ ಪಾಳಿಗೆ ವೈದ್ಯರ ನಿಯೋಜಿಸಿ ಎಂದು ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು. ಇನ್ನೂ ಕೆಲವೆಡೆ ಹೆರಿಗೆ ವೇಳೆ ಹಣಕ್ಕೆ ಬೇಡಿಕೆ ಇಟ್ಟಿರುವುದಕ್ಕೆ ಸಂಸದರು ಹಾಗೂ ಡಿಸಿ ಅವರು ಬೇಸರ ಹೊರ ಹಾಕಿದರು. ಈ ಬಗ್ಗೆ ಚರ್ಚಿಸಲು ನಾಳೆಯೇ ವೈದ್ಯರ ಸಭೆ ಕರೆಯಿರಿ ಎಂದು ಸಂಸದರು ನಿರ್ದೇಶನ ನೀಡಿದರು.

**ವೈದ್ಯರ ಬಗ್ಗೆ ಅಸಮಾಧಾನ** : ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಸೇವೆ ಮಾಡುವ ಬಗ್ಗೆ ಶಾಸಕ ಕೆ.ಎಂ. ಶಿವಲಿಂಗೇಗೌಡ ಅಸಮಾಧಾನ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆಯ ಮೇಲಧಿಕಾರಿಗಳು ಈ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು. ಸರ್ಕಾರಿ ವೈದ್ಯರು ಸರಿಯಾಗಿ ಕರ್ತವ್ಯ ನಿರ್ವಹಿಸದ ಕಾರಣ, ಜನರು ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಸಾಲ ಮಾಡುವಂತಾಗಿದೆ ಎಂದು ಬೇಸರ ಹೊರ ಹಾಕಿದರು.

ಸರ್ಕಾರಿ ವೈದ್ಯರು 24 ಗಂಟೆಯೂ ಕರ್ತವ್ಯ ನಿರ್ವಹಿಸಬೇಕು. ಅದಕ್ಕಾಗಿ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಾಗಿ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಅವರು, ಹಿಮ್ಸ್ ವೈದ್ಯರೂ ಬೆಳಿಗ್ಗೆ ಹಾಜರಾತಿ ಹಾಕಿ ಹೊರಗೆ ಹೋಗುತ್ತಿದ್ದಾರೆ ಎಂಬ ದೂರುಗಳಿವೆ. ಇದು ಮುಂದುವರೆದರೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಧ್ಯೆ ಪ್ರವೇಶಿಸಿದ ಸಂಸದ ಶ್ರೇಯಸ್ ಪಟೇಲ್, ಬಡವರು ಹೆಚ್ಚಾಗಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸರಿಯಾಗಿ ಕರ್ತವ್ಯ ನಿರ್ವಹಿಸದಿದ್ದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಔಷಧಿ ಸಮಸ್ಯೆ ಇದೆ. ರೋಗಿಗಳಿಗೆ ಹೊರಗಡೆ ತರುವಂತೆ ವೈದ್ಯರು ಬರೆದುಕೊಡುತ್ತಿದ್ದಾರೆ ಎಂಬ ಆರೋಪ ಇದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಹೆಚ್ಓ ಡಾ.ಅನಿಲ್, ಪ್ರತಿ ಆಸ್ಪತ್ರೆಯಲ್ಲಿ ಎಬಿಆರ್‌ಕೆ ಅನುದಾನ ಇದೆ ಸಮಸ್ಯೆ ಇಲ್ಲ ಎಂದರು. ಅಧಿಕಾರಿಗಳು ತಪ್ಪು ಮಾಡಿದರೆ ಸರ್ಕಾರ, ಜಿಲ್ಲಾಡಳಿತ ಮೇಲೆ ಗೂಬೆ ಕೂರಿಸೋ ಕೆಲಸ ಆಗುತ್ತದೆ. ಹಾಗಾಗದಂತೆ ನೀವು ಸರಿಯಾಗಿ ಕೆಲಸ ಮಾಡಬೇಕು. ಉತ್ತಮ ಆರೋಗ್ಯ ಸೇವೆ ಮಾಡಿ ಶಿವಲಿಂಗೇಗೌಡ ಸಲಹೆ ನೀಡಿದರು. ಎಷ್ಟೋ ಆಸ್ಪತ್ರೆಗಳಲ್ಲಿ ರಾತ್ರಿವೇಳೆ ವೈದ್ಯರೇ ಇರಲ್ಲ ಎಂಬ ದೂರಿದೆ. ಸರ್ಕಾರಿ ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು ಕೆಲಸ ಮಾಡುತ್ತಾರೆ. ಏಕೆ ಹೀಗೆ ಎಂದು ಶಾಸಕರು ಕೇಳಿದರು. ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಲಾಗದಿದ್ದರೆ ಖಾಸಗೀಕರಣ ಮಾಡೋಣ ಬಿಡಿ ಎಂದು ಶಿವಲಿಂಗೇಗೌಡ ಅಸಮಾಧಾನ ಹೊರ ಹಾಕಿದರು.

### ಅಪೌಷ್ಟಿಕತೆ ನಿವಾರಣೆಗೆ ಕ್ರಮ ವಹಿಸಿ

ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳ ಸಮರ್ಪಕ ನಿರ್ವಹಣೆ ಹಾಗೂ ಅಪೌಷ್ಟಿಕ ಮಕ್ಕಳ ಬಗ್ಗೆ ನಿಗಾವಹಿಸದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಧರಣಿ ಕುಮಾರ್ ವಿರುದ್ಧ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಆಕ್ರೋಶ ವ್ಯಕ್ತಪಡಿಸಿದರು.

67 ಸಾವಿರ ಅಂಗನವಾಡಿ ಮಕ್ಕಳಲ್ಲಿ ಕೇವಲ 94 ಮಕ್ಕಳಲ್ಲಿ ಮಾತ್ರ ಅಪೌಷ್ಟಿಕತೆ ಇದೆ ಎನ್ನುವುದು ಸುಳ್ಳು. ಈ ಬಗ್ಗೆ ಸರಿಯಾದ ಸರ್ವೆ ನಡೆಸಿ ಮಾಹಿತಿ ಕೊಡಿ ಎಂದು ತಾಕೀತು ಮಾಡಿದರು. ಕೂಡಲೇ ಎಲ್ಲ ಅಂಗನವಾಡಿಗಳಿಗೆ ಭೇಟಿ ನೀಡುವಂತೆ ಸೂಚಿಸಿದರು.




# ನೀಲಾ ನಾಗಭೂಷಣ್‌ಗೆ ವಚನ ವಾಗ್ಮಿ ಪ್ರಶಸ್ತಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ನೆಲಮಂಗಲದಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ವಚನ ಕಂಠಪಾಠ ಸ್ಪರ್ಧೆಯಲ್ಲಿ 990 ವಚನ ವಾಚಿಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದ ಜಿಲ್ಲೆಯ ನೀಲಾ ನಾಗಭೂಷಣ್ ಸಾಧನೆ ಶ್ಲಾಘನೀಯ ಎಂದು ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಸಿ.ಎಂ. ನಿಂಗರಾಜು ಹೇಳಿದರು.

ವಚನ ವಾಗ್ಮಿ ಪ್ರಶಸ್ತಿಗೆ ಭಾಜನರಾದ ನೀಲಾ ನಾಗಭೂಷಣ್ ಅವರಿಗೆ ತಾಲ್ಲೂಕು ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ, ಯುವ ಘಟಕದಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿ, ಶರಣರು ವಚನಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ಸಾರಿದ್ದಾರೆ. ವಚನಗಳ ತಾತ್ಪರ್ಯ ಅರಿತು ಉತ್ತಮ ಜೀವನ ನಡೆಸಿದರೆ ನೆಮ್ಮದಿ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದರು.

ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ತೀರ್ಥಕುಮಾರಿ ವೆಂಕಟೇಶ್ ಮಾತನಾಡಿ, ಸುತ್ತೂರು ಜಗದ್ಗುರುಗಳು ಸ್ಥಾಪಿಸಿದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಯಾವ ಜಾತಿ, ಧರ್ಮಕ್ಕೆ ಸೀಮಿತವಾಗದೆ ಬಸವಾದಿ ಶರಣರ ವಚನ ಸಾಹಿತ್ಯದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ತಾಲ್ಲೂಕಿನಲ್ಲಿ ಪರಿಷತ್ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದೆ. ನೀಲಾ ಅವರು ಕಲಿತ ವಿದ್ಯೆಯನ್ನು ಯುವ ಜನಾಂಗಕ್ಕೆ ತಿಳಿಸುವ ಕೆಲಸ ಆಗಬೇಕು ಎಂದರು.




ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ ಮಾತನಾಡಿ, ವಚನ ಸಾಹಿತ್ಯ ಕನ್ನಡದ ಅತ್ಯಂತ ಪ್ರಮುಖ ಸಾಹಿತ್ಯ ಪ್ರಕಾರ. ಛಂದಸ್ಸು, ಪ್ರಾಸಗಳು ಸೇರಿ ವ್ಯಾಕರಣ ಬದ್ಧವಾಗಿ ಸಂಸ್ಕೃತ ಲೇಪಿತ ಹಳಗನ್ನಡ ಕಾಲಘಟ್ಟದಲ್ಲಿ ಜನರಾಡುವ ಮಾತುಗಳ ಮೂಲಕ ಒಳಗೊಂದು ಹೊರಗೊಂದು ಎಂಬುದು ಇಲ್ಲದೆ ನಡೆ-ನುಡಿ ಸಿದ್ಧಾಂತವನ್ನು ರೂಪಿಸಿದ ಬಸವಾದಿ ಶರಣರು ವಚನಗಳ ಮೂಲಕ ಸಮಾಜ ಪರಿವರ್ತನೆಯ ಪ್ರವರ್ತಕರಾಗಿದ್ದಾರೆ ಎಂದರು.

ವಚನ ಸಾಹಿತ್ಯವನ್ನು ಗುರು ಬಸವಣ್ಣ ಮತ್ತು ಅವರ ಸಮಕಾಲೀನ ಶರಣರು ನೀಡಿದರು. ಅನುಭವ ಮಂಟಪ ಸ್ಥಾಪಿಸಿ 770 ಶರಣರು ಅಸಂಖ್ಯಾತ ವಚನಗಳನ್ನು ಸಾಹಿತ್ಯಕ್ಕೆ ನೀಡಿದ್ದಾರೆ. ಇಂತಹ ವಚನ ಸಾಹಿತ್ಯ ಉಳಿಸಿ ಬೆಳೆಸುವ ಕಾರ್ಯವನ್ನು ಶರಣ ಸಾಹಿತ್ಯ ಪರಿಷತ್ ಮುಂದುವರೆಸಿದೆ ಎಂದರು. ವಚನ ವಾಗ್ಮಿ ನೀಲಾ ನಾಗಭೂಷಣ್ ಮಾತನಾಡಿ, ಕಳೆದ 25 ವರ್ಷದಿಂದ ನಿರಂತರ ವಚನ ಅಧ್ಯಯನ ಮಾಡುತ್ತಿದ್ದೇನೆ. ನೆಲಮಂಗಲ ವಚನ ಕಂಠಪಾಠ ಸ್ಪರ್ಧೆಯಲ್ಲಿ 990 ವಚನ ವಾಚಿಸುವ ಅವಕಾಶ ದೊರೆಯಿತು. ನಾನು ಬಹುಮಾನಕ್ಕಿಂತ ಬಸವಾದಿ ಶರಣರ ವಚನಗಳನ್ನು ಉಳಿಸುವ ನಿಟ್ಟಿನಲ್ಲಿ ಸಣ್ಣ ಸೇವೆ ಮಾಡಿರುವೆ ಎಂದರು.

ತಾಲ್ಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಶಿರೇಖಾ, ಜಿಲ್ಲಾ ಯುವ ಘಟಕ ಅಧ್ಯಕ್ಷ ಚಂದನ್ ಕುಮಾರ್, ತಾಲ್ಲೂಕು ಘಟಕದ ಉಪಾಧ್ಯಕ್ಷೆ ಗೀತಾ ಶಿವರಾಜ್, ಹಳೇಬೀಡು ಹೋಬಳಿ ಅಧ್ಯಕ್ಷೆ ವಿನುತ ಧನಂಜಯ್, ಶರಣ ಸಾಹಿತ್ಯ ಪರಿಷತ್ ನಿರ್ದೇಶಕರಾದ ಶಶಿಕಲಾ ಸತೀಶ್, ಗೌರ ಮಂಜುನಾಥ, ನಿವೃತ್ತ ಸೈನಿಕ ನಾಗಭೂಷಣ್, ನಿಖಿಲ್, ಶಶಿಕಲಾ ರಾಜಶೇಖರ ಇತರರಿದ್ದರು.

# ಮರಳು ಸಾಗಾಟ ಪ್ರಶ್ನಿಸಿದ್ದಕ್ಕೆ ಜೀವ ಬೆದರಿಕೆ?

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹೊಳೆನರಸೀಪುರ: ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಮಣ್ಣು ತುಂಬುತ್ತಿದ್ದುದನ್ನು ಪ್ರಶ್ನಿಸಿದ್ದಕ್ಕೆ ಸರ್ಕಾರಿ ಅಧಿಕಾರಿಗಳ ಮೇಲೆ ಮರಳು ದಂಧೆಕೋರರು ಟಿಪ್ಪರ್ ಹತ್ತಿಸಲು ಯತ್ನಿಸಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ತಾಲ್ಲೂಕಿನ ಗುಂಜೇವು ತೋಟಗಾರಿಕೆ ಕ್ಷೇತ್ರದಲ್ಲಿ ಈ ಘಟನೆ ನಡೆದಿದ್ದು ಟಿಪ್ಪರ್ ಚಾಲಕ ಅಧಿಕಾರಿಯೊಬ್ಬರ ಮೇಲೆ ವಾಹನ ಚಲಾಯಿಸುತ್ತಿದ್ದ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ ಮತ್ತೊಬ್ಬರಿಗೆ ಕೈ ಸನ್ನೆ ಮೂಲಕ ಎಚ್ಚರಿಕೆ ನೀಡಿದ್ದಾನೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಗ್ರಾಮಾಂತರ ಠಾಣೆ ಪೊಲೀಸರು ಪರಿಸ್ಥಿತಿ ಶಾಂತಗೊಳಿಸಿದ್ದಾರೆ.


ಆದರೆ ಈ ವಿಡಿಯೋ ಹಳೆಯದು ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಗುಂಜೇವು ತೋಟಗಾರಿಕೆ ಕ್ಷೇತ್ರ ವ್ಯಾಪ್ತಿಯ ಮಣ್ಣು ಸಾಗಿಸುತ್ತಿರುವುದು ಇತ್ತೀಚಿಗಿನ ಪ್ರಕ್ರಿಯೆಯಲ್ಲ. ಹಲವು ವರ್ಷಗಳಿಂದ ಈ ಕೆಲಸ ನಡೆಯುತ್ತಿದೆ.



ಅಧಿಕಾರಿಗಳ ಮೇಲೆ ಟಿಪ್ಪರ್ ಹತ್ತಿಸಲು ಬಂದಿದ್ದು ಎನ್ನಲಾದ ವಿಡಿಯೋಗಳು ತಿಂಗಳ ಹಿಂದಿನವು. ಸ್ಥಳೀಯರು ಕಟ್ಟಡ ಕಾಮಗಾರಿಗೆ ಅಗತ್ಯಕ್ಕೆ ತಕ್ಕಷ್ಟು ಮಣ್ಣು ಸಾಗಿಸುತ್ತಾರೆ. ಮಾರಾಟದ ಉದ್ದೇಶದಿಂದ ಸಾಗಿಸುತ್ತಿದ್ದರೆ ಅಂತವರ ವಿರುದ್ಧ ಕ್ರಮ ಜರುಗಿಸಬಹುದು. ಈ ಸಂಬಂಧ ಯಾವ ವಿಚಾರವು ಗಮನಕ್ಕೆ ಬಂದಿಲ್ಲ ಎಂದು ಪೊಲೀಸ್ ಇಲಾಖೆ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

ತಾಲ್ಲೂಕಿನ ಗುಂಜೇವು ಗ್ರಾಮದ ಸರ್ವೆ ನಂ. 1ರಲ್ಲಿ 153 ಎಕರೆ ತೋಟಗಾರಿಕೆ ಕ್ಷೇತ್ರವಿದೆ. ಅದರಲ್ಲಿ 14 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಕ್ಷೇತ್ರದ ಕಾರ್ಯ ಚಟುವಟಿಕೆ ನಡೆಯುತ್ತಿದೆ. ಉಳಿದ ಜಾಗ ಖಾಲಿಯಾಗಿದ್ದು ರಾತ್ರಿ ಹೊತ್ತು ಅಕ್ರಮವಾಗಿ ಮಣ್ಣು ತುಂಬಲಾಗುತ್ತಿದೆ. ಮೂಡಲಹಿಪ್ಪೆ ಗ್ರಾಮದ ಎಂ.ಡಿ. ನವೀನ್ ಎಂಬಾತ ಜೆಸಿಬಿ ಮುಖಾಂತರ ಮಣ್ಣು ತೆಗೆದು ಗ್ರಾಮದ ದೇವೇಗೌಡ ಎಂಬುವರ ಜಮೀನಿನಲ್ಲಿ ಶೇಖರಿಸಿದ್ದಾನೆ. ಈ ಸಂಬಂಧ ಕಂದಾಯ ಇಲಾಖೆ, ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದಾಗ ಅವರು ಮಣ್ಣು ತುಂಬದಂತೆ ನವೀನ್‌ಗೆ ಸೂಚನೆ ನೀಡಿದ್ದರು. ಆದರೂ ಮಣ್ಣು ಸಾಗಾಟಕ್ಕೆ ಕಡಿವಾಣ ಬಿದ್ದಿಲ್ಲ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಸಂಬಂಧಪಟ್ಟವರ ವಿರುದ್ಧ ಎಫ್‌ಐಆರ್ ದಾಖಲಿಸಿ ನೈಸರ್ಗಿಕ ಸಂಪತ್ತನ್ನು ರಕ್ಷಿಸಬೇಕೆಂದು ಆಗ್ರಹಿಸಿ ಏ. 24 ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯ ವಲಯ ಇವರು ದೂರು ನೀಡಿದ್ದರು.

# ನವ್ಯಶ್ರೀಗೆ ಶಾಸಕ ಸಿಮೆಂಟ್ ಮಂಜು ಅಭಿನಂದನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 623 ಅಂಕ ಪಡೆದು ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿರುವ ಬಾಳ್ಳುಪೇಟೆಯ ವಿವೇಕ ಆಂಗ್ಲ ಮಾಧ್ಯಮ ಶಾಲೆಯ ಹೆಚ್.ಸಿ. ನವ್ಯಶ್ರೀಗೆ ಶಾಸಕ ಸಿಮೆಂಟ್ ಮಂಜು ಅಭಿನಂದಿಸಿದರು.

ವಿದ್ಯಾರ್ಥಿನಿಯ ಮನೆಗೆ ಮಂಗಳವಾರ ಭೇಟಿ ನೀಡಿದ ಶಾಸಕರು ಶಾಲು ಹಾರ ಹಾಕಿ ಅಭಿನಂದಿಸಿದರು. ರಾಜ್ಯಕ್ಕೆ 3ನೇ ಹಾಗು ತಾಲ್ಲೂಕಿಗೆ ಪ್ರಥಮ ಸ್ಥಾನ ಪಡೆದಿರುವ ನವ್ಯಶ್ರೀ ಅವರ ಭವಿಷ್ಯದ ವ್ಯಾಸಂಗವು ಉನ್ನತ ಸ್ಥಾನದಲ್ಲಿರಲಿ ಎಂದು ಆಶಿಸಿದರು.

ವಿದ್ಯಾರ್ಥಿನಿಯ ತಂದೆ ಚೇತನ್, ತಾಯಿ ಶೀಲಾ, ಮುಖಂಡರಾದ ಅಬ್ಬನ ಕೃಷ್ಣಮೂರ್ತಿ, ಶಿವಕುಮಾರ್, ರಾಕೇಶ್, ರಿತೇಶ್ ಹಸುಗವಳ್ಳಿ ಹಾಜರಿದ್ದರು.

# ಯೋಗ ವಿದ್ಯೆ ಕಲಿತು ಇತರರಿಗೂ ತಲುಪಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಿತ್ಯ ಜೀವನದಲ್ಲಿ ಯೋಗ, ಪ್ರಾಣಾಯಾಮವನ್ನು ಕರ್ತವ್ಯದಂತೆ ಮೈಗೂಡಿಸಿಕೊಳ್ಳಬೇಕು. ಕುಟುಂಬದ ಎಲ್ಲರೂ ಯೋಗ ಪಟುಗಳಾದರೆ ಆರೋಗ್ಯಯುತ ವಾತಾವರಣ ನಿರ್ಮಿಸಿಕೊಳ್ಳಬಹುದು. ಜತೆಗೆ ಇತರರಿಗೂ ವಿದ್ಯೆಯನ್ನು ಹಂಚಬೇಕು ಎಂದು ಹರಿದ್ವಾರ ಪತಂಜಲಿ ಯೋಗ ಪೀಠದ ಮುಖ್ಯ ಕೇಂದ್ರೀಯ ಪ್ರಭಾರಿ ಸ್ವಾಮಿ ಪರಮಾರ್ಥ ದೇವ್ ಜೀ ತಿಳಿಸಿದರು.

ನಗರದ ಗೋಮತಿ ಕಲ್ಯಾಣ ಮಂಟಪದಲ್ಲಿ ಪತಂಜಲಿ ಯೋಗ ಪರಿವಾರ ವತಿಯಿಂದ ಹಮ್ಮಿಕೊಂಡಿರುವ ಉಚಿತ ಯೋಗ ಧ್ಯಾನ ಪ್ರಾಣಾಯಾಮದ 2ನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿ, ಯೋಗದ ಮಹತ್ವ, ಪ್ರಯೋಜನಗಳ ಕುರಿತು ಪ್ರತಿಯೊಬ್ಬರೂ ಅರಿವು ಹೊಂದಬೇಕು. ಬೆಳಗಾವಿ ಜಿಲ್ಲೆಯಲ್ಲಿ 2 ಸಾವಿರ ಶಿಕ್ಷಕರು ಕಳೆದ ಆರು ತಿಂಗಳಿಂದ ಯೋಗ ತರಬೇತಿಗೆ ಹಾಜರಾಗುತ್ತಿದ್ದಾರೆ. ಯೋಗ ಕಲಿತವರು ಒಬ್ಬರಿಂದ ಒಬ್ಬರಿಗೆ ಕಲಿಸುವಂತಾದರೆ ಮಾತ್ರ ಇಂತಹ ಕಾರ್ಯಕ್ರಮಗಳಿಗೆ ಅರ್ಥ ಬರುತ್ತದೆ ಎಂದರು.




ಹಳ್ಳಿ ಹಳ್ಳಿಯ ಪ್ರತಿ ಮನೆಗೂ ಯೋಗ ತಲುಪಬೇಕು. ನಿತ್ಯ ಕರ್ತವ್ಯದ ಜೊತೆ ಯೋಗವು ಕೂಡ ಮೈಗೂಡಿಸಿಕೊಳ್ಳಬೇಕು ಎಂದರು.

ಆರೋಗ್ಯಕ್ಕೆ ಆದ್ಯತೆ ನೀಡದಿದ್ದರೆ ಭವಿಷ್ಯದ ದಿನಗಳಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ. ಸಣ್ಣ ಪುಟ್ಟ ಕಾಯಿಲೆಗಳಿಗೆ ಔಷಧಿ, ಮಾತ್ರೆ ಸೇವಿಸದೆ ಮನೆ ಮದ್ದು ಮಾಡಿಕೊಳ್ಳಬೇಕು. ಗಂಭೀರ ಸಮಸ್ಯೆಯಿದ್ದರೆ ಮಾತ್ರ ವೈದ್ಯರ ಭೇಟಿಯಾಗಬೇಕು. ಆಯುರ್ವೇದ ಔಷಧಿ ಬಗೆಗಿನ ಮಹತ್ವ ತಿಳಿಸಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸವನ್ನು ಪತಂಜಲಿ ಯೋಗ ಪರಿವಾರ ಮಾಡುತ್ತಿದೆ ಎಂದು ಹೇಳಿದರು.

ಪತಂಜಲಿ ಯೋಗ ಪರಿವಾರದ ನಿಕಟ ಪೂರ್ವ ಜಿಲ್ಲಾ ಸಂರಕ್ಷಕ ಹರಿಹರಪುರ ಶ್ರೀಧರ್, ಜಿಲ್ಲಾ ಸಂರಕ್ಷಕ ಲೋಕನಾಥ್, ಭಾರತ್ ಸ್ವಾಭಿಮಾನ್ ಟ್ರಸ್ಟ್ ಜಿಲ್ಲಾ ಪ್ರಭಾರಿ ಶೇಷಪ್ಪ, ಪತಂಜಲಿ ಯೋಗ ಸಮಿತಿ ಜಿಲ್ಲಾ ಪ್ರಭಾರಿ ಗಿರೀಶ್, ಯುವ ಭಾರತ್ ಜಿಲ್ಲಾ ಪ್ರಭಾರಿ ಸುರೇಶ್ ಪ್ರಜಾಪತಿ, ಕಿಸಾನ್ ಸೇವಾ ಸಮಿತಿ ಜಿಲ್ಲಾ ಪ್ರಭಾರಿ ನಾಗೇಶ್, ಮಹಿಳಾ ಪತಂಜಲಿ ಯೋಗ ಸಮಿತಿ ಜಿಲ್ಲಾ ಪ್ರಭಾರಿ ಶಾರದಾ ಧರ್ಮಾನಂದ್, ಗೋಮತಿ ಕಲ್ಯಾಣ ಮಂಟಪ ಮಾಲೀಕ ದಿನೇಶ್, ನಿಟ್ಟೂರು ಜಯರಾಮ್, ಡಾ. ಪಾಲಾಕ್ಷ ಇತರರಿದ್ದರು.

# ಹೆದ್ದಾರಿ ಮರು ಡಾಂಬರೀಕರಣ ಕಾಮಗಾರಿ ಪರಿಶೀಲನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ರಾಷ್ಟ್ರೀಯ ಹೆದ್ದಾರಿಯ ಹಳೆ ರಸ್ತೆಗಳಿಗೆ ಮರು ಡಾಂಬರೀಕರಣ ಕಾಮಗಾರಿ ನಡೆಯುತ್ತಿದ್ದು ಶಾಸಕ ಸಿಮೆಂಟ್ ಮಂಜು ಅವರು ಮಂಗಳವಾರ ಪರಿಶೀಲನೆ ನಡೆಸಿದರು.

ಪಟ್ಟಣದ ಬಿ.ಎಂ. ರಸ್ತೆ ಆರ್.ಬಿ. ಸ್ಟೀಲ್ ಸಮೀಪ ರಸ್ತೆ ಕಾಮಗಾರಿ ವೀಕ್ಷಿಸಿ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕಿಸುವ ಮುಖ್ಯ ರಸ್ತೆ ಇದಾಗಿದೆ. ಯಾವುದೇ ಲೋಪವಾಗದ ರೀತಿ ಕಾಮಗಾರಿ ಪೂರ್ಣಗೊಳಿಸಬೇಕು. ಗುಣಮಟ್ಟ ಕಾಪಾಡಿಕೊಳ್ಳಬೇಕು. ಹೇಮಾವತಿ ಸೇತುವೆಯ ಎರಡು ಬದಿಯಲ್ಲಿ ಮಳೆ ನೀರು ಹರಿದು ಹೋಗಲು ರಸ್ತೆ ಬದಿಯ ಗುಂಡಿಗಳಲ್ಲಿ ಮಣ್ಣು ಕೂರದಂತೆ ನೋಡಿಕೊಳ್ಳಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿದರು.



ಬೈಪಾಸ್ ರಸ್ತೆ ಆರಂಭವಾಗುವ ಕೊಲ್ಲಹಳ್ಳಿಯಿಂದ ಬಾಳೆಗದ್ದೆ, ತೇಜಸ್ವಿ ವೃತ್ತ, ಹಳೇ ಹೇಮಾವತಿ ಸೇತುವೆ, ಹಳೇ ಬಸ್ ನಿಲ್ದಾಣ, ಚಂಪಕ ನಗರ ಮಾರ್ಗವಾಗಿ ಮಂಗಳೂರು ಕಡೆಯಿಂದ ಬೈಪಾಸ್ ಪ್ರವೇಶಿಸುವ ಆನೆಮಹಲ್ ಸಮೀಪದವರೆಗೆ, ಬಾಳ್ಳುಪೇಟೆ ಹಾಗೂ ಪಾಳ್ಯ ಒಳ ರಸ್ತೆ ಈ ಹಿಂದೆ ರಾಷ್ಟ್ರೀಯ ಹೆದ್ದಾರಿ 75ರ ವ್ಯಾಪ್ತಿಯಲ್ಲಿದ್ದು ಮೂರು ಕಡೆ ಬೈಪಾಸ್ ರಸ್ತೆ ನಿರ್ಮಾಣವಾಗಿದ್ದರಿಂದ ಪ್ರಮುಖ ರಸ್ತೆಗಳು ಹದಗೆಟ್ಟಿತ್ತು. ಅದರಲ್ಲೂ ಪಟ್ಟಣದ ಹೇಮಾವತಿ ಸೇತುವೆ ಮೇಲಿನ ರಸ್ತೆ ಸಹ ಗುಂಡಿಮಯವಾಗಿದ್ದು ವಾಹನ ಸವಾರರಿಗೆ ಬಹಳ ತೊಂದರೆ ಉಂಟಾಗಿತ್ತು.

ಈ ಹಿನ್ನೆಲೆಯಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಕೇಂದ್ರ ಹೆದ್ದಾರಿ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿ ಹಳೇ ರಾಷ್ಟ್ರೀಯ ಹೆದ್ದಾರಿ ದುರಸ್ತಿ ಪಡಿಸಲು ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆ. ಅದಕ್ಕೆ ಸ್ಪಂದಿಸಿದ ಸಚಿವರು 10.6 ಕೋಟಿ ರೂ. ಹಣ ಬಿಡುಗಡೆ ಮಾಡಿದ್ದಾರೆ. ಮಳೆಗಾಲ ಪ್ರಾರಂಭಕ್ಕೂ ಮುನ್ನವೇ ಕಾಮಗಾರಿ ಮುಗಿಸುವ ಸಲುವಾಗಿ ತ್ವರಿತವಾಗಿ ರಸ್ತೆಗಳ ಮರು ಡಾಂಬರೀಕರಣ ಕಾಮಗಾರಿ ನಡೆಯುತ್ತಿದೆ ಎಂದರು.

# ಪಡಿತರ ವಿತರಣೆಗೆ ಹಣ ಪಡೆದರೆ ಕ್ರಮ: ಎಚ್ಚರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ನ್ಯಾಯಬೆಲೆ ಅಂಗಡಿಗಳಲ್ಲಿ ಸಮರ್ಪಕವಾಗಿ ಪಡಿತರ ವಿತರಿಸದೆ ಸಾರ್ವಜನಿಕರಿಂದ ತಲಾ 10 ರೂ. ಪಡೆಯುತ್ತಿರುವ ಆರೋಪ ಕೇಳಿಬಂದಿದ್ದು, ಇದೇ ವರ್ತನೆ ಮುಂದುವರೆದರೆ ಕ್ರಮ ಜರುಗಿಸಲಾಗುವುದು ಎಂದು ತಾಲ್ಲೂಕು ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಅಧ್ಯಕ್ಷ ಎಲ್.ಪಿ. ಪ್ರಕಾಶ್‌ಗೌಡ ಎಚ್ಚರಿಕೆ ನೀಡಿದರು.

ಪಟ್ಟಣದ ಮಿನಿವಿಧಾನ ಸೌಧದಲ್ಲಿ ತಹಶೀಲ್ದಾರ್ ನವೀನ್‌ಕುಮಾರ್ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ನ್ಯಾಯಬೆಲೆ ಅಂಗಡಿ



ಮಾಲೀಕರ ಸಭೆಯಲ್ಲಿ ಮಾತನಾಡಿ, ಎಲೆಕ್ಟ್ರಾನಿಕ್ಸ್ ಸ್ಕೇಲ್ ಉಪಯೋಗಿಸದೆ ತೂಕದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಹಾಗೂ ದರಪಟ್ಟಿ ನಮೂದು ಮಾಡದೆ ಇರುವ ಅಂಗಡಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಕೆಲ ನ್ಯಾಯಬೆಲೆ ಅಂಗಡಿಗಳಲ್ಲಿ ತೂಕದ ವ್ಯತ್ಯಾಸ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ಸಮಿತಿಗೆ ದೂರು ಬಂದಿದ್ದು ಈ ಬಗ್ಗೆ ಹಲವಾರು ಬಾರಿ ಕೆಲವು ಅಂಗಡಿ ಮಾಲೀಕರಿಗೆ ತಿಳಿಸಿದರೂ ಸಹ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಇದೇ ರೀತಿ ಮುಂದುವರೆದರೆ ಅಂಗಡಿ ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ದೂರು ನೀಡಲಾಗುವುದು. ತಾಲೂಕಿನ ಕೆಲವು ನ್ಯಾಯ ಬೆಲೆ ಅಂಗಡಿ ಮಾಲೀಕರು ಯಾವುದೇ ಹಣ ಪಡೆಯದೆ ಸರ್ಕಾರದ ನಿಯಮಾನುಸಾರವಾಗಿ ಕೆಲಸ ಮಾಡುತ್ತಿದ್ದು ರಾಜ್ಯ ಸಮಿತಿಯ ನಿರ್ದೇಶನದ ಮೇರೆಗೆ ತಾಲೂಕಿ ಸಮಿತಿ ಸದಸ್ಯರು ತಾಲೂಕಿನ 112 ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪರಿಶೀಲಿಸಲಾಗುವುದು. ಅಂತಹ ಸಂದರ್ಭದಲ್ಲಿ ಅಂಗಡಿ ಮಾಲೀಕರು ಸಮಿತಿಗೆ ದಾಖಲಾತಿಗಳೊಂದಿಗೆ ಮಾಹಿತಿಯನ್ನು ನೀಡಬೇಕು. ಹಾಗೂ ಅಂಗಡಿಯ ಹೊರಗೆ ಮಾಹಿತಿ ಪಟ್ಟಿ ಹಾಗೂ ಭದ್ರತಾ ದೃಷ್ಠಿಯಿಂದ ಸಿಸಿ ಕ್ಯಾಮರಾಗಳನ್ನು ಅಳವಡಿಸಿ ಸ್ವಚ್ಛತೆಯನ್ನು ಕಾಪಾಡಬೇಕು ಎಂದರು.

ತಹಶೀಲ್ದಾರ್ ನವೀನ್ ಕುಮಾರ್ ಮಾತನಾಡಿ, ನ್ಯಾಯಬೆಲೆ ಅಂಗಡಿಗಳಲ್ಲಿ ಸರ್ಕಾರ ನೀಡಿರುವ ಮಾರ್ಗಸೂಚಿಯಂತೆ ಪಡಿತರ ವಿತರಣೆ ಮಾಡಬೇಕು. ನ್ಯಾಯಬೆಲೆ ಅಂಗಡಿ ಕೇಂದ್ರದಿಂದ ಮಾಲೀಕರು ಬೇರೆ ಊರಿಗೆ ಸ್ವಂತ ವಾಹನದಲ್ಲಿ ಪಡಿತರ ವಿತರಣೆ ಮಾಡುವ ಸಂಬಂಧ ಖರ್ಚಿಗೆ ಸಂಬಂಧಿಸಿದಂತೆ ಗ್ಯಾರಂಟಿ ಸಮಿತಿಯ ಸಹಯೋಗದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಖರ್ಚು ಭರಿಸಲಾಗುವುದು ಎಂದು ತಿಳಿಸಿದರು.

ಗ್ಯಾರಂಟಿ ಸಮಿತಿ ಸದಸ್ಯರಾದ ಕೆ. ನಾಗೇಶ್, ಗಣೇಶ್, ರಂಗಸ್ವಾಮಿ, ಮಧು, ಆಹಾರ ನಿರೀಕ್ಷಕ ಹೇಮಂತ್ ಕುಮಾರ್, ಹೇಮಲತಾ ಇತರರಿದ್ದರು.

# ಬಡ್ಡಿ ಕಟ್ಟುವಂತೆ ಹಿಂಸೆ: ಆತ್ಮಹತ್ಯೆಗೆ ಯತ್ನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ಬಡ್ಡಿ ಕಟ್ಟುವಂತೆ ಸಾಲಗಾರರು ನೀಡುತ್ತಿದ್ದ ಕಿರುಕುಳ ಸಹಿಸಲಾಗದೆ ಕೋಳಿ ವ್ಯಾಪಾರಿಯೊಬ್ಬ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಬಾಳ್ಳುಪೇಟೆಯಲ್ಲಿ ನಡೆದಿದೆ.

ಈ ಸಂಬಂಧ ಎಂಟು ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ತಾಲ್ಲೂಕಿನ ಬಾಳ್ಳುಪೇಟೆಯ ಸಂತೆ ಮೈದಾನದಲ್ಲಿ ಕೋಳಿ ವ್ಯಾಪಾರ ಮಾಡಿಕೊಂಡಿರುವ ಮೊಹಮದ್ ತಂಜೀರ್ ಶನಿವಾರ ಸಂಜೆ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಸದ್ಯ ಹಿಮ್ಸ್ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಳೆದ ಮೂರು ವರ್ಷಗಳಿಂದ ವ್ಯಾಪಾರಕ್ಕಾಗಿ ಹಲವರ ಬಳಿ ಸಾಲ ಮಾಡಿದ್ದೇನೆ. ನಿಯಮಿತವಾಗಿ ಬಡ್ಡಿ ಕಟ್ಟುತ್ತಿದ್ದೆ. ಇತ್ತೀಚೆಗೆ ವ್ಯಾಪಾರ ಕುಸಿತವಾದ ಕಾರಣ ಬಡ್ಡಿ ಹಣ ಪಾವತಿಸಲು ಸಾಧ್ಯವಾಗಲಿಲ್ಲ. ಬಡ್ಡಿ ನೀಡುವಂತೆ ಒತ್ತಡ, ಬೆದರಿಕೆ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ಎಂದು ತಂಜೀರ್ ತಿಳಿಸಿದ್ದಾರೆ.


ಬಾಳ್ಳುಪೇಟೆಯ ಅಂಬೇಡ್ಕರ್ ನಗರ ನಿವಾಸಿ ಪೊಲೀಸ್ ಇಲಾಖೆಯ ಅರುಣ್ ಕುಮಾರ್ ಅವರಿಂದ 80 ಸಾವಿರ ರೂ. ಪಡೆದು ವಾರಕ್ಕೆ 7,800 ರೂ., ಮೂಗಲಿ ಗ್ರಾಮದ ಸತೀಶ್ ಅವರಿಂದ 80 ಸಾವಿರ ರೂ. ಪಡೆದಿದ್ದು ಮೂರು ತಿಂಗಳಿಗೆ 12,000 ರೂ., ಸ್ವಾಮಿ ಅವರಿಂದ ಪಡೆದಿರುವ 50 ಸಾವಿರ ರೂ.ಗೆ ಮೂರು ತಿಂಗಳಿಗೆ 7 ಸಾವಿರ ರೂ., ಹೆದ್ದುರ್ಗದ ಲಾಯರ್ ದುಶಾಂತ್ ಅವರ ಬಳಿ 20 ಸಾವಿರ ರೂ. ಸಾಲ ಪಡೆದು ವಾರಕ್ಕೆ 1,400 ರೂ., ಮೊಬೈಲ್ ಅಂಗಡಿಯ ಅಮೀರ್ ಅವರಿಂದ 50 ಸಾವಿರ ರೂ. ಸಾಲವಾಗಿ ಮೂರು ತಿಂಗಳಿಗೆ 7,500 ರೂ., ಮಾಸುವಳ್ಳಿ ಗ್ರಾಮದ ಪುಟ್ಟಣ್ಣ ಅವರಿಂದ 30 ಸಾವಿರ ರೂ.ಗೆ ಮೂರು ತಿಂಗಳಿಗೆ 4,500 ರೂ., ಸುನೀಲ್ ಎಂಬುವರಿಂದ 1.30 ಲಕ್ಷ ರೂ. ಪಡೆದು ಮೂರು ತಿಂಗಳಿಗೆ 19 ಸಾವಿರ ರೂ., ಬಡ್ಡಿ ಹಾಗು ಬಾಗೆ ಗ್ರಾಮದ ರಾಜಣ್ಣರಿಂದ 30 ಸಾವಿರ ರೂ. ಪಡೆದು ಮೂರು ತಿಂಗಳಿಗೆ 9 ಸಾವಿರ ರೂ. ಬಡ್ಡಿ ಕಟ್ಟುತ್ತಿದ್ದೆ ಎಂದು ಅವರು ದೂರಿನಲ್ಲಿ ಹೇಳಿದ್ದಾರೆ.

# ಲಾರಿ ಡಿಕ್ಕಿಯಾಗಿ ಕಾನ್ಸಟೇಬಲ್ ಸಾವು

ಹಾಸನ: ನಗರ ಹೊರವಲಯದ ಕೆಂಚಟ್ಟಹಳ್ಳಿ ಬಳಿ ಲಾರಿ ಡಿಕ್ಕಿಯಾಗಿ ಬೈಕ್‌ನಲ್ಲಿ ತೆರಳುತ್ತಿದ್ದ ಪೊಲೀಸ್ ಕಾನ್ಸಟೇಬಲ್ ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ.

11ನೇ ರಾಜ್ಯ ಮೀಸಲು ಪೊಲೀಸ್ ಪಡೆ ಪೊಲೀಸ್ ಕಾನ್ಸಟೇಬಲ್ ಪ್ರಕಾಶ್ (38) ಮೃತರು. ನಗರದಿಂದ ಬೈಕ್‌ನಲ್ಲಿ ಕರ್ತವ್ಯಕ್ಕೆ ತೆರಳುತ್ತಿದ್ದಾಗ ಎದುರುಗಡೆಯಿಂದ ವಿರುದ್ಧ ದಿಕ್ಕಿನಲ್ಲಿ ಬಂದ ಲಾರಿ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಉತ್ಸವ್ ಪಟೇಲ್‌ಗೆ ಶಾಸಕ ಸಿಮೆಂಟ್ ಮಂಜು ಅಭಿನಂದನೆ



ಹಾಸನ: ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಉತ್ಸವ್ ಪಟೇಲ್ ಅವರನ್ನು ಶಾಸಕ ಶಾಸಕ ಸಿಮೆಂಟ್ ಮಂಜು ಅಭಿನಂದಿಸಿದರು.

ಡಿ.ಟಿ. ಪ್ರಕಾಶ್ ಹಾಗೂ ಆಶಾರಾಣಿ ದಂಪತಿ ಪುತ್ರ ನಗರದ ವಿಜಯ ಶಾಲೆಯ ಉತ್ಸವ್ ಪಟೇಲ್ 625ಕ್ಕೆ 625 ಅಂಕ ಗಳಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಜಿಲ್ಲೆಗೆ ಕೀರ್ತಿ ತಂದಿರುವ ವಿದ್ಯಾರ್ಥಿಯ ಸಾಧನೆಗೆ ಕಾರಣರಾದ ಪಾಠ ಬೋಧಿಸಿದ ಶಿಕ್ಷಕರು, ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರಿಗೆ ಅಭಿನಂದಿಸಿದರು.


# ಶಿವಾಜಿ ಮಹಾರಾಜರ ನಿಜ ಚರಿತ್ರೆ ಅರಿಯಿರಿ

– ರಜನೀಶ್ ಸಾಗರ

ದೇಶದ ಚರಿತ್ರೆಯಲ್ಲಿ ಅನೇಕ ರಾಜಮಹಾರಾಜರು ಆಗಿ ಹೋಗಿದ್ದಾರೆ. ಇಂದಿಗೂ ಎದ್ದು ಕಾಣುವ ಹೆಸರುಗಳೆಂದರೆ, ಅಶೋಕ, ಅಕ್ಬರ್, ಛತ್ರಪತಿ ಶಿವಾಜಿ, ರಾಣಿ ಚೆನ್ನಮ್ಮ, ಮದಕರಿ ನಾಯಕ, ಟಿಪ್ಪು ಸುಲ್ತಾನ್, ನಾಲ್ವಡಿ ಕೃಷ್ಣರಾಜ ಒಡೆಯರ್ ಮುಂತಾದವರು ಪ್ರಸ್ತುತರಾಗಿ, ಅವಿಸ್ಮರಣೀಯರಾಗಿ ತೋರುತ್ತಾರೆ. ಇವರನ್ನೆಲ್ಲಾ ಏಕೆ ಅಭಿಮಾನದಿಂದ ಸ್ಮರಿಸಿಕೊಳ್ಳುತ್ತೇವೆ?

ಯಾರ ಹುಟ್ಟು ಮತ್ತು ಸಾವಿನ ನಡುವಿನ ಹಾದಿಯಲ್ಲಿ ಅವರು ರೂಪಿಸಿಕೊಂಡ ದೃಷ್ಟಿ ಧೋರಣೆಗಳು, ಅವುಗಳ ನೆಲೆಗಟ್ಟಾಗಿ ಕಾರ್ಯನಿರ್ವಹಿಸಿದ ತತ್ವ ಆದರ್ಶಗಳು ನಮ್ಮ ಬದುಕಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತವೆ. ಅವರ ಸಾಧನೆ, ಹಿರಿಮೆ ಗರಿಮೆ ನಮಗೆ ಮಹತ್ವದವುಗಳಾಗಿ ಪರಿಣಮಿಸುತ್ತವೆ.

ಈ ಕಾದಂಬರಿ ಸಾದರಪಡಿಸಿರುವಂತೆ ಶಿವಾಜಿ ಮಹಾಜನಪ್ರಿಯ ರಾಜನಾಗಿದ್ದನು. ತನ್ನ ರಾಜ್ಯದ ಸರ್ವಧರ್ಮದವರನ್ನು ಸಮಭಾವದಿಂದ ಕಾಣುತಿದ್ದ ಶ್ರೇಷ್ಠ ಧರ್ಮಾತ್ಮನಾಗಿದ್ದನು. ಬಾಲ್ಯದಿಂದಲೂ ತನ್ನ ತಾಯಿ ಜೀಜಾಬಾಯಿಯವರ ನಿರ್ದೇಶನದಲ್ಲಿಯೇ ಬೆಳೆದು ದೊಡ್ಡವನಾಗಿದ್ದ ಶಿವಾಜಿಗೆ ಮಹಿಳೆಯರ ಬಗ್ಗೆ ಅಪಾರ ಗೌರವಾದರಗಳಿದ್ದವು. ಒಬ್ಬ ಧರ್ಮಾತೀತ ಜಾತ್ಯಾತೀತ ವೀರ ರಾಜನನ್ನು ಇಂದು ಒಬ್ಬ ಧರ್ಮಾಂಧನಂತೆ ಚಿತ್ರಿಸುತ್ತ ಹಿಂದೂ ಹೃದಯ ಸಾಮ್ರಾಟನೆಂದು ಬಹುಪರಾಕ್ ಹಾಕಿ




ಹಾಡಿ ಹೊಗಳುತ್ತಿರುವವರ ರಾಜಕೀಯ ಹುನ್ನಾರಗಳನ್ನು ನಾವಿಂದು ಅರ್ಥಮಾಡಿಕೊಳ್ಳಬೇಕಾಗಿದೆ. ಶಿವಾಜಿ ಅತ್ಯುತ್ತಮ ರಾಜನಾಗಿದ್ದ. ಧರ್ಮಾಂಧತೆಯನ್ನು ಮೀರಿದ, ಸಂಕುಚಿತ ಮತಾಭಿಮಾನದ ಗಡಿಯಾಚೆಗೆ ವಿಹರಿಸುತ್ತಿದ್ದ ಶ್ರೇಷ್ಠ ರಾಜನಾಗಿದ್ದ.

ಅವನ ಅನೇಕ ಆತ್ಮೀಯರು, ಆಪ್ತರು ಮುಸಲ್ಮಾನರಾಗಿದ್ದರು. ಅವನ ಸೈನ್ಯದಲ್ಲಿ ಅನೇಕ ಮುಸಲ್ಮಾನ ದಂಡಾಧೀಶರಿದ್ದರು. ಮುಸ್ಲಿಂ ರಾಜರ ಸಂಚಿನಿಂದ ಬಚಾಯಿಸಿ, ಶಿವಾಜಿಯ ಜೀವ ಉಳಿಸಿದ ಪ್ರಮುಖರೆಲ್ಲ ಮುಸ್ಲಿಮರೇ ಆಗಿದ್ದರು. ಪೋರ್ಚುಗೀಸ್ ಮತ್ತು ಬ್ರಿಟೀಷರ ವಿರುದ್ಧ ತನ್ನ ಬಲವೃದ್ಧಿಸಿಕೊಳ್ಳುವ ಸಲುವಾಗಿ ಬಹು ಜಾಣ್ಮೆಯಿಂದ ಒಂದು ಬಲಿಷ್ಠವಾದ ನೌಕಾಪಡೆಯನ್ನೂ ಕೂಡಾ ಕಟ್ಟಿದ್ದನು. ಆ ನೌಕಾಪಡೆಯ ಚೀಫ್ ಎಡ್ಮಿರಲ್ ಒಬ್ಬ ಮುಸ್ಲಮಾನನಾಗಿದ್ದನು! ತನ್ನ ತೋಪ್ ಖಾನೆಗಳ ಜವಾಬ್ದಾರಿಯನ್ನು ಮುಸ್ಲಿಮರಿಗೆ ವಹಿಸಿಕೊಟ್ಟಿದ್ದ. ಶಿವಾಜಿ ಒಬ್ಬ ಪ್ರಜಾವತ್ಸಲ ರಾಜನಾಗಿದ್ದನೆ ವಿನಃ ಪರಧರ್ಮದವರ ಬಗೆಗಿನ ಸಂಶಯ ಪಿಶಾಚಿಗೆ ತನ್ನ ತಲೆಯಲ್ಲಿ ಜಾಗ ಕೊಟ್ಟರಲಿಲ್ಲ. ಅಂತೆಯೇ ಅವನ ನಂಬಿಕೆಗೆ ನಿಷ್ಠರಾಗಿದ್ದ ಯಾವೊಬ್ಬ ಮುಸ್ಲಿಂ ಸೈನಿಕನೂ, ದಂಡಾಧೀಶನೂ ಶಿವಾಜಿಗೆ ದ್ರೋಹ ಬಗೆದಿರಲಿಲ್ಲ.

ದ್ರೋಹ ಬಗೆದವರಲ್ಲಿ ಹೆಚ್ಚಿನ ಸಂಖ್ಯೆಯ ಜನರು ಅವನ ಸಂಬಂಧಿ ಆಪ್ತೇಷ್ಟರೇ ಆಗಿದ್ದರು. ಅವನ ಬದುಕಿನುದ್ದಕ್ಕೂ ಜೀವ ಹಿಂಡಿ ಹಿಪ್ಪೆ ಮಾಡಿದವರು, ಅವಕಾಶ ಸಿಕ್ಕಾಗಲೆಲ್ಲ ಅವಮಾನಿಸಿ, ಕುಗ್ಗಿಸಲು ಯತ್ನಿಸಿದ ಕುತ್ಸಿತಮತಿಗಳು ವೈದಿಕ ಪುರೋಹಿತರೇ ಆಗಿದ್ದರು.

ಶಿವಾಜಿಯ ಪಟ್ಟಾಭಿಷೇಕಕ್ಕೆ ನೂರೆಂಟು ವಿಘ್ನಗಳನ್ನು ಒಡ್ಡಿದ ಪುಣೆಯ ಪುರೋಹಿತಶಾಹಿಯ ಇಂದಿನ ವಾರಸುದಾರರೇ ಚರಿತ್ರೆಯನ್ನು ತಿರುಚಿ ಶಿವಾಜಿಯನ್ನು ಒಬ್ಬ ಹಿಂದೂ ರಾಜನೆಂದು ಬಿಂಬಿಸಲು ಹೆಣಗುತ್ತಿದ್ದಾರೆ. ಈ ಕಹಿ ಸತ್ಯ ಮರಾಠರಿಂದ ಹಿಡಿದು ಸಕಲ ಹಿಂದುಳಿದ ದಲಿತ- ದಮನಿತ, ಅಲ್ಪಸಂಖ್ಯಾತರಿಗೆ ಮನದಟ್ಟಾಗಿದೆ. ಆದ್ದರಿಂದಲೇ ಇಡೀ ಭಾರತದ ಜನತೆ ಈಗ ಶಿವಾಜಿ ಮಹಾರಾಜನನ್ನು ಅಶೋಕ, ಅಕ್ಬರ್, ರಾಣಿ ಚೆನ್ನಮ್ಮ, ಕೃಷ್ಣರಾಜ ಒಡೆಯರ್ ಸಾಲಿನಲ್ಲಿ ಬಹು ಹೆಮ್ಮೆಯಿಂದ ಗುರುತಿಸಿ, ಗೌರವಿಸುತ್ತಿದ್ದಾರೆ.

ಶಿವಾಜಿ ಮಹಾರಾಜರ ಕುರಿತು ವಿರಳಾತೀವಿರಳ ಮಾಹಿತಿ ಈ ಕನ್ನಡ ಕಾದಂಬರಿಯಲ್ಲಿದೆ. ಮೇಲಿನ ಎಲ್ಲಾ ಘಟನೆಗಳಿಗೆ ಸಾಕ್ಷ್ಯಾಧಾರಗಳು ಕಾದಂಬರಿಯಲ್ಲಿ ಸಾಕಷ್ಟು ದೊರಕುತ್ತವೆ.

ಮಹಾರಾಷ್ಟ್ರದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದ ರಣಜೀತ್ ದೇಸಾಯಿಯವರು ರಚಿಸಿದ ಈ ಬೃಹತ್ ಕಾದಂಬರಿಯನ್ನ ಸಮರ್ಥವಾಗಿ ರಾಹು ರವರು ಅನುವಾದಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಅತ್ಯಂತ ಹೆಚ್ಚು ಮಾರಾಟವಾದ ಈ ಐತಿಹಾಸಿಕ ಕಾದಂಬರಿಯನ್ನು ಟಿಸೃಷ್ಟಿ ಪಬ್ಲೀಕೇಶನ್‌ಟಿ ಬೆಂಗಳೂರು ಇವರು ಪ್ರಕಟಿಸಿದ್ದಾರೆ. 980 ಪುಟಗಳಿರುವ ಕಾದಂಬರಿ 1200 ರೂಪಾಯಿಗಳ ಮುಖಬೆಲೆ ಹೊಂದಿದೆ. ಶಿವಾಜಿಯಂಥ ಶ್ರೇಷ್ಠ, ಸ್ವಾಭಿಮಾನಿ ಸೆಕ್ಯುಲರ್ ಮಹಾರಾಜನನ್ನು ಧರ್ಮಾಂಧನನ್ನಾಗಿ ಚಿತ್ರಿಸುತ್ತಿರುವ ದುರುದ್ದೇಶವನ್ನು ಅರ್ಥ ಮಾಡಿಕೊಳ್ಳಲು ಕೃತಿಯನ್ನು ಪ್ರತಿಯೊಬ್ಬರೂ ಓದಲೇಬೇಕಾದದ್ದು ನ್ಯಾಯ. ಅಂತಹ ಎಲ್ಲಾ ಕೊಂಡು ಓದುವ ಓದುಗರಿಗೆ ರವೀಂದ್ರ ಪುಸ್ತಕಾಲಯ, ಚಾಮರಾಜಪೇಟೆ ಸಾಗರದಲ್ಲಿ ರಿಯಾಯಿತಿ ದರದಲ್ಲಿ ಕಾದಂಬರಿ ಲಭ್ಯವಿದೆ.

# ಚಿನ್ನಾಭರಣ ಕದ್ದು ಖಾಲಿ ಬ್ಯಾಗ್ ಬಿಟ್ಟು ಹೋದ ಕಳ್ಳರು

ಹಾಸನ: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಸಂಚರಿಸುತ್ತಿದ್ದ ಮಹಿಳೆಯ ಬ್ಯಾಗ್ ನಲ್ಲಿದ್ದ 35 ಗ್ರಾಂ ತೂಕದ ಚಿನ್ನಾಭರಣ ಹಾಗೂ 20 ಗ್ರಾಂ ತೂಕದ ಬೆಳ್ಳಿ ಆಭರಣ ಕದ್ದಿರುವ ಕಳ್ಳರು ಖಾಲಿ ಬ್ಯಾಗ್ ಅನ್ನು ಅಲ್ಲೇ ಬಿಟ್ಟು ಹೋಗಿರುವ ಘಟನೆ ನಡೆದಿದೆ.

ಮೂಡಿಗೆರೆ ತಾಲ್ಲೂಕು ಚಿನ್ನಿಗ ಜನ್ನಾಪುರ ಗ್ರಾಮದ ಆಶಾ ಚಿನ್ನಾಭರಣ ಕಳೆದುಕೊಂಡವರು. ಏ. 27 ರದು ನಗರ ಬಸ್ ನಿಲ್ದಾಣದಿಂದ ಹೊಸ ಬಸ್ ನಿಲ್ದಾಣಕ್ಕೆ ತೆರಳಿದ್ದ ಅವರು ಅಲ್ಲಿಂದ ಬೇಲೂರು ಬಸ್‌ನಲ್ಲಿ ತೆರಳಿದ್ದರು. ಬೇಲೂರು ಬಸ್ ನಿಲ್ದಾಣದಲ್ಲಿ ಪರಿಶೀಲಿಸಿದಾಗ ವ್ಯಾನಿಟಿ ಬ್ಯಾಗ್ ಇಲ್ಲದಿರುವುದು ತಿಳಿದಿದೆ. ತಕ್ಷಣವೇ ಡಿಪೋ ವ್ಯವಸ್ಥಾಪಕರಿಗೆ ದೂರು ನೀಡಿ ದೂರವಾಣಿ ಮೂಲಕ ಹಾಸನದ ಅಧಿಕಾರಿಗಳಿಗೆ ಕರೆ ಮಾಡಿದಾಗ ನಗರ ಸಾರಿಗೆ ಬಸ್ ಚಾಲಕನನ್ನು ವಿಚಾರಿಸಿದ್ದಾರೆ. ಬಸ್‌ನಲ್ಲಿ ವ್ಯಾನಿಟಿ ಬ್ಯಾಗ್ ಸಿಕ್ಕಿದೆಯಾದರೂ ಅದು ಖಾಲಿ ಇರುವುದು ಗೊತ್ತಾಗಿದೆ. ಬ್ಯಾಗ್‌ನಲ್ಲಿ ಚಿನ್ನಾಭರಣ ಇದ್ದುದ್ದನ್ನು ಮೊದಲೇ ಗಮನಿಸಿದ್ದ ಯಾರೋ ಚಿನ್ನಾಭರಣಗಳನ್ನೆಲ್ಲ ತೆಗೆದುಕೊಂಡು ಖಾಲಿ ಬ್ಯಾಗ್ ಇಟ್ಟಿದ್ದಾರೆ.

11ಗ್ರಾಂ ತೂಕದ ಜುಮುಕಿ ಓಲೆ, 6 ಗ್ರಾಂ ತೂಕದ ಸೈಡ್ ಮಾಟಿ, 6 ಗ್ರಾಂ ತೂಕದ ಎರಡು ಚಿನ್ನದ ಉಂಗುರ, 12 ಗ್ರಾಂ ತೂಕದ ಚೈನು ಮತ್ತು ಗಣೇಶ ಡಾಲರ್, 5000 ರೂ. ಬೆಲೆ ಬಾಳುವ ಕೈಗಡಿಯಾರ, 20 ಗ್ರಾಂ ತೂಕದ ಬೆಳ್ಳಿ ಸರ, ಕಡಗ ಕಳುವಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಮೇ -7

1948: ಭಾರತದ ಮೊದಲ ರಾಷ್ಟ್ರೀಯ ಏರ್‌ಲೈನ್‌ಗಳಲ್ಲೊಂದು ಎ ಇಂಡಿಯಾ ಪ್ರಾರಂಭವಾಯಿತು.

1960: ಭಾರತ-ಪಾಕಿಸ್ತಾನ ಗಡಿ ವಿವಾದದ ಹಿನ್ನೆಲೆಯಲ್ಲಿ ಭಾರತ ಸರ್ಕಾರ ನೆಹರೂ-ನೂನ್ ಒಪ್ಪಂದವನ್ನು ಅನುಸರಿಸಿ ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿ ನಿಲುವುಗಳನ್ನು ಪುನರ್ ಪರಿಶೀಲಿಸಿತು.

### ಜನನ

1861: ಗುರುದೇವ ರವೀಂದ್ರನಾಥ ಠಾಗೋರ್. ಕವಿ, ಕಥೆಗಾರ, ಚಿಂತಕರು ಮತ್ತು ಮೊದಲ ಭಾರತೀಯ ನೊಬೆಲ್ ಪುರಸ್ಕೃತರು

1909:: ಬಿಷ್ಣು ಪ್ರಸಾದ್ ಖೇತ್ರೀ: ಹೆಸರಾಂತ ಪತ್ರಕರ್ತ ಹಾಗೂ ಸಾಹಿತ್ಯ ಸಮಾಲೋಚಕ.

1923: ಮಾರುತಿ ರಾವ್: ಜನಪ್ರಿಯ ಚಿತ್ರಕಥೆಕಾರ ಮತ್ತು ಚಿತ್ರನಿರ್ದೇಶಕ (ದಕ್ಷಿಣ ಭಾರತ ಚಿತ್ರರಂಗದಲ್ಲಿ).

### ಮರಣ

2002: ಶೆಲ್ಲಿ ಬೋಸ್: ಪ್ರಖ್ಯಾತ ಬಂಗಾಳಿ ನಟಿ.

2021: ಬಾಬಾ ಸಾಹೇಬ್ ಪುರಂದರೆ: ಪ್ರಸಿದ್ಧ ಶಿವಾಜಿ ಮಹಾರಾಜರ ಜೀವನ ಚರಿತ್ರೆಗಾರ ಮತ್ತು ಇತಿಹಾಸಕಾರ.

# ನಗುವೆಂಬ ದಿವ್ಯ ಔಷಧ: ನಗುವಿದ್ದಲ್ಲಿ ಸ್ವರ್ಗ



– ಚೇತನ್ ಗುರೂಜಿ,
ಬಸವ ಯೋಗ ಕೇಂದ್ರ, ಅಡಗೂರು

ನಗುವಿನಂತಹ ದಿವ್ಯ ಔಷಧ ಮತ್ತೊಂದಿಲ್ಲ, ಆದರೆ ನೀವು ಯಾವುದೇ ಕಾರಣವಿಲ್ಲದೆ ನಗುತ್ತಿದ್ದೀರಿ ಅಂದ್ರೆ ಔಷಧ ಬೇಕೇ ಬೇಕು. ಹಾಗಾಗಿ ಕಾರಣವಿಲ್ಲದೆ ನಗುವುದು ಸಹ ಕಾಯಿಲೆಯೇ ಸರಿ. ನಗುವ ಸನ್ನಿವೇಶ ಸಿಕ್ಕರೂ ಸಹ ನಗಲಾರದಂತಹ ಜನರೇ ಹೆಚ್ಚು. ಅದರಲ್ಲೂ ನಾಗರಿಕತೆಯ ನಾಗಾಲೋಟದ ಮಧ್ಯೆ ನಗುವುದು ಒಂದು ಅದ್ಭುತ ಎಂಬಂತೆ ನೋಡುವ ಸ್ಥಿತಿಗೆ ಬಂದು ತಲುಪಿದ್ದೇವೆ.

ದೇಹಕ್ಕೆ ಶಕ್ತಿ ಮತ್ತು ಚೈತನ್ಯ ಅಲ್ಲದೆ ದೀರ್ಘಾಯುಷ್ಯದ ಗುಟ್ಟು ನಗುವೆಂಬುದು ಗೊತ್ತಿದೆಯೋ ಅಥವಾ ಗೊತ್ತಿದ್ದರೂ ನಗುವ ಪ್ರಯತ್ನವನ್ನು ಸಹ ನಾವುಗಳು ಮಾಡುವುದಿಲ್ಲವೋ ಇವತ್ತಿನ ದಿನದಲ್ಲಿ ಯಕ್ಷ ಪ್ರಶ್ನೆಯಾಗಿದೆ. ಎಂಬತ್ತಾಲ್ಕು ಕೋಟಿ ಜೀವ ರಾಶಿಗಳಲ್ಲಿ ಮನುಷ್ಯ ಎಲ್ಲರಿಗಿಂತಲೂ ಶ್ರೇಷ್ಠ ಜೀವಿ ಎಂಬುದು ಗೊತ್ತು. ಇಷ್ಟೆಲ್ಲಾ ಜೀವರಾಶಿಗಳಲ್ಲಿ ನಗುವುದಕ್ಕೆ ಅವಕಾಶ ಕೊಟ್ಟಿರುವುದು ಸಹ ಮನುಷ್ಯನೊಬ್ಬನಿಗೆ ಮಾತ್ರ ಎಂಬ ಸತ್ಯ ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ.

ನಗುವಿಗೆ ಬಡವ ಶ್ರೀಮಂತ, ಶ್ರೇಷ್ಠ ಕನಿಷ್ಠ, ಮೇಲು ಕೀಳು ಎಂಬ ಯಾವುದೇ ಭೇದ ಭಾವವಿಲ್ಲದೆ ಎಲ್ಲರಿಗೂ ಸಮಾನವಾಗಿ ಕೊಟ್ಟಿರುವಂತಹ ಅವಕಾಶವೇ ನಗು. ನಗುವಿನಂತಹ ದಿವ್ಯ ಔಷಧವನ್ನು ನಾವು ಹೇಗೆ ಬಸಿಕೊಳ್ಳಬೇಕು ಎಂಬುದೇ ಬುದ್ದಿವಂತರಾದ ನಮಗೆ ತಿಳಿಯುತ್ತಿಲ್ಲವಲ್ಲ ಎಂಬುದೇ ಬೇಸರದ ಸಂಗತಿ.

ಒಂದು ಮಗು ಜನನವಾದ ನಂತರ ಪ್ರತಿನಿತ್ಯ ಐನೂರು ಬಾರಿ ನಗುತ್ತದಂತೆ ಅದೇ ಮಗು ಬೆಳೆದು ಜಾಣನಾಗುತ್ತಾ ಹೋದಂತೆ ದಿನಕ್ಕೆ ಒಂದು ಬಾರಿಯೂ ನಗುವುದಕ್ಕೂ ಪ್ರಯತ್ನಿಸುವುದೇ ಇಲ್ಲವೆಂದು ತತ್ವಜ್ಞಾನಿಗಳು ಹೇಳುತ್ತಾರೆ. ನಾವು ನಗುವುದನ್ನು ಮರೆತು ಗಳಿಸುವುದಕ್ಕೆ ಬಂದಿದ್ದೇವೆಂಬ ಭ್ರಮೆಯಲ್ಲಿ ಮುಳುಗಿರುವವರ ಸಂಖ್ಯೆ ಹೆಚ್ಚಾಗಿದೆ. ನಮ್ಮ ಸುತ್ತಮುತ್ತ ಇರುವಂತಹ ಜನರು ಮತ್ತು ವಾತಾವರಣ ಹಾಗೆ ಇರುವುದರಿಂದ ನಾವುಗಳು ಅದೇ ಸತ್ಯವೆಂದು ತಿಳಿದು ಅದರ ಹಿಂದೆಯೇ ಓಡುತ್ತಿದ್ದೇವೆ.

ಕೆಲವರು ಹಣ, ಆಸ್ತಿ, ಅಧಿಕಾರ ಹೆಸರು ಕೀರ್ತಿ ಪ್ರಶಸ್ತಿ ಹೀಗೆ ಇದರ ಹಿಂದೆ ಓಡುವವರ ದೊಡ್ಡ ಪಟ್ಟಿಯೇ ಬೆಳೆಯುತ್ತಿದೆ. ಇಷ್ಟೇ ಜೀವನವೆಂಬ ಕಲ್ಪನಾ ಪ್ರಪಂಚದಲ್ಲಿ ಬದುಕುತ್ತಿದ್ದಾರೆ ಇದನ್ನು ದಾಟಿ ಮುಂದೆ ಒಂದು ಹೊಸ ಪ್ರಪಂಚ ನಮ್ಮ ಕಣ್ಣೆದುರಿಗೆ ಇದೆ ಎಂಬುದು ಸಹ ಗೊತ್ತಿಲ್ಲ. ಇವುಗಳ ಹಿಂದೆ ಓಡುತ್ತಾ ಸಾಗುತ್ತಿರುವವರ ನಡುವೆ ನಗುತ್ತಾ ನಲಿಯುತ್ತಾ ಜೀವನ ಸಾಗಿಸಬೇಕು ಎಂದು ಹೇಳಿದರೆ ಅವರನ್ನು ಬೇರೆ ದೃಷ್ಟಿಕೋನದಲ್ಲಿ ನೋಡುವವರೇ ಜಾಸ್ತಿ.

ನಗುವುದಕ್ಕೆ ಏನು ಮಾಡಬೇಕು ಎಂದು ಕೆಲವರು ಪ್ರಶ್ನೆ ಮಾಡುತ್ತಾರೆ. ಅಂತವರಿಗೆ ನಗುವುದು ಮತ್ತು ಇನ್ನೊಬ್ಬರನ್ನು ನಗಿಸುವುದು ಖಂಡಿತ ಸಾಧ್ಯವಾಗುವುದಿಲ್ಲ. ಹುಟ್ಟಿನಿಂದಲೇ ಅವರು ಒಂಥರಾ ಬಟ್ಟೆ ಅಂಗಡಿಯ ಮುಂದೆ ನಿಲ್ಲಿಸಿದ ಗೊಂಬೆಯ ರೀತಿ ಇರುತ್ತಾರೆ. ಅಂತವರನ್ನು ನಗಿಸುವುದು ಬಹಳ ಕಷ್ಟ. ಅದಕ್ಕೆ ಜೀವವಿಲ್ಲ ಇವರಿಗೆ ಜೀವವಿದೆ ಅಷ್ಟೇ .

ಇವರ ಮ್ಯಾನುಫ್ಯಾಕ್ಚರ್ ತಯಾರಾಗಿರುವುದೇ ಹೀಗೆಂದು ಹೇಳಬಹುದು. ಕೆಲವರು ಹೀಗಿರುತ್ತಾರೆ ನಗುವುದಕ್ಕೂ ಬಹಳ ಜಿಪುಣತನವನ್ನು ತೋರಿಸುವುದುಂಟು ಇನ್ನೊಂದಿಷ್ಟು ಜನರು ನಕ್ಕರೆ ಇನ್ನೊಬ್ಬರು ಏನೆಂದುಕೊಳ್ಳುತ್ತಾರೋ ಎಂದು ನಗುವುದೇ ಇಲ್ಲ. ಇವರಿಗೆ ಯಾವ ರೀತಿ ತಿಳಿಸುವುದು ಅರ್ಥವಾಗುವುದಿಲ್ಲ.

ನಗುವುದಕ್ಕೆ ಯಾವುದೇ ಸಮಯದ ಕಟ್ಟುಪಾಡುಗಳಿಲ್ಲ ವಾರದ ಗೋಜುಗಳಿಲ್ಲ ಬೆಳಿಗ್ಗೆ ಸಂಜೆ ಎಂಬ ಭೇದ ಭಾವವಿಲ್ಲ ಯಾವಾಗ ನಗುವ ಸಂದರ್ಭ ಸಿಗುತ್ತದೋ ಆಗಲೇ ನಕ್ಕು ಬಿಡಬೇಕು. ಆ ಸಮಯ ಆ ದಿನ ಆ ಗಳಿಗೆ ಮತ್ತೆ ಸಿಗುವುದು ಸಾಧ್ಯವಿಲ್ಲ. ಕೆಲವು ಜನರು ಈಗ ನಗುವುದು ಬೇಡ ಆ ಮೇಲೆ ನಕ್ಕರಾಯಿತು ಎಂಬ ಯೋಚನೆ ಮಾಡುತ್ತಾ ನಗುವ ಅವಕಾಶ ಕಳೆದುಕೊಳ್ಳುತ್ತಾರೆ.



ಜನರು ಹೇಗಾಗಿದ್ದಾರೆಂದರೆ ಬೆಲೆಬಾಳುವ ಆಭರಣ ಸುಂದರವಾದ ಬಟ್ಟೆಗಳು ಹಾಕಿಕೊಂಡಿದ್ದರೆ ಎಲ್ಲರೂ ನಮ್ಮನ್ನು ಮಾತನಾಡಿಸುತ್ತಾರೆ ಗೌರವಿಸುತ್ತಾರೆ ಎಂದು ಅಂದುಕೊಂಡಿದ್ದಾರೆ. ಅಂತ ಕಾಲ ಈಗಿಲ್ಲ ಎಂಬುದು ಗೊತ್ತಿಲ್ಲ. ಮುಖದಲ್ಲಿ ಒಂದಿಷ್ಟು ನಗುವೆಂಬ ಖರ್ಚಿಲ್ಲದ ಆಭರಣವೇ ಭೂಷಣವೆಂಬುದು ಅರ್ಥವಾದರೆ ಸಾಕು.

ಮುಖದ ಮೇಲೆ ನಗುವಿಲ್ಲದೆ ಇದ್ದರೆ ಹೆಣಕ್ಕೆ ಶೃಂಗಾರ ಮಾಡಿದಂತೆ. ಜೀವವಿಲ್ಲದ ವ್ಯಕ್ತಿಗೆ ಏನೇ ಮಾಡಿದರು ಗೊತ್ತಾಗುವುದಿಲ್ಲ. ನಾವು ಜೀವಂತವಾಗಿರುವಾಗ ನಕ್ಕು ಬಿಡಬೇಕು ಹೋದಾಗ ನಗುವುದಕ್ಕಾಗುತ್ತದೆಯೇ ನೋಡೋಣ ಹೇಳಿ.

ನಗುವುದರಿಂದ ನಮ್ಮಲ್ಲಿರುವ ಒತ್ತಡ ಅನೇಕ ದುಃಖ ದುಮ್ಮಾನಗಳನ್ನ ದೂರ ಮಾಡಿಕೊಳ್ಳಬಹುದು. ಜೊತೆಗೆ ದೇಹದ ಅನಾರೋಗ್ಯವನ್ನು ವಾಸಿ ಮಾಡಿಕೊಳ್ಳುವ ದೇವರು ಕೊಟ್ಟಂತಹ ಉಚಿತ ಔಷಧಿ ಅದುವೇ ನಗು. ಅನೇಕ ಕಡೆ ಬರೆದಿರುತ್ತಾರೆ ಬಿ ಹ್ಯಾಪಿ ನೋ ಬಿಪಿ ಎಂದು.

ನಗುತ್ತಿದ್ದರೆ ದೇಹದ ನರನಾಡಿಗಳಲ್ಲಿ ರಕ್ತದ ಚಲನೆ ಸರಾಗವಾಗಿ ನಡೆಯುತ್ತಾ ರಕ್ತದೊತ್ತಡ ಕಡಿಮೆಯಾಗುತ್ತದೆ. ಹೃದಯಘಾತದಂತಹ ಸಮಸ್ಯೆ ಬರುವುದಿಲ್ಲವೆಂದು ಹೇಳುವುದನ್ನು ಕೇಳಿದ್ದೇವೆ.

ನಾವು ಕೋಪಗೊಂಡರೆ ದೇಹದ ನರನಾಡಿಗಳ ಚಟುವಟಿಕೆಗಳ ಮೇಲೆ ಬಹಳ ಅಡ್ಡ ಪರಿಣಾಮವನ್ನು ಬೀರುತ್ತದೆ. ಅದೇ ನಗುತ್ತಿದ್ದರೆ ದೇಹದ ಅಂಗಾಂಗಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ. ದೀರ್ಘಾಯುಷ್ಯಗಳಾಗಿ ಬದುಕಲಿಕ್ಕೂ ನಗುವೆಂಬುದು ಒಂದೊಳ್ಳೆಯ ಮಾತ್ರೆ. ಮುಖವನ್ನು ಗಂಟಿಕ್ಕಿಕೊಂಡರೆ ಅರವತ್ತು ನರಗಳು ಕೆಲಸ ಮಾಡಬೇಕಾಗುತ್ತದೆ. ಅದುವೇ ಸಂತೋಷದಿಂದಿದ್ದರೆ ಐದು ನರಗಳು ಸಾಕು ಎಂದು ಸಂಶೋಧನೆ ದೃಢಪಡಿಸಿದೆ. ಅಷ್ಟು ದೇಹಕ್ಕೆ ಚೈತನ್ಯವನ್ನು ತಂದುಕೊಡುವಂತಹ ಉಚಿತ ಔಷಧಿಯನ್ನು ನಾವೇಕೆ ಮರೆತಿದ್ದೇವೋ ಗೊತ್ತಾಗುತ್ತಿಲ್ಲ.

ನಗುತ್ತಿದ್ದರೆ ಎಷ್ಟೋ ಸಮಸ್ಯೆಗಳು ನಮ್ಮಿಂದ ದೂರಾಗುತ್ತದೆ. ನಗುವುದನ್ನು ಮರೆತಿರುವ ಜನರಿಗೆ ದೊಡ್ಡ ನಗರಗಳಲ್ಲಿ ಇದಕ್ಕಾಗಿ ಸಂಘಗಳು ಇವೆ. ದಿನನಿತ್ಯ ಒಂದಿಷ್ಟು ಸಮಯ ನಗುವುದನ್ನು ಕಲಿಸಿಕೊಡುತ್ತಾರೆ. ಅದಕ್ಕಾಗಿ ಒಂದಿಷ್ಟು ಹಣವನ್ನು ವ್ಯಯ ಮಾಡುತ್ತಾರೆ. ಇವರನ್ನು ನೋಡಿ ಕೆಲವು ಜನರು ಅಂದುಕೊಳ್ಳುತ್ತಾರೆ. ನಕ್ಕರೆ ಒತ್ತಡ ಸಮಸ್ಯೆ ಬಗೆಹರಿಯುತ್ತದೆ ಎಂದು ಅವರವರೇ ಮಾತನಾಡಿಕೊಳ್ಳುತ್ತಾರೆ. ಗೊತ್ತಿಲ್ಲ ಅಷ್ಟು ವೇಳೆಯಲ್ಲಿಯಾದರೂ ನಗುತ್ತಾರಲ್ಲ ಎಂದು.

ಒಂದು ಮನೆಯನ್ನು ಎಷ್ಟು ಸುಂದರವಾಗಿ ಕಟ್ಟಿದ್ದೇವೆ. ಒಳಗಡೆ ಎಷ್ಟೆಲ್ಲ ಬೆಲೆಬಾಳುವ ವಸ್ತುಗಳು ಇದ್ದಾವೆ ಎಂಬುದು ಮುಖ್ಯವಾಗುವುದಿಲ್ಲ. ಮನೆಯೊಳಗಿರುವ ಜನರು ಎಷ್ಟು ಸಂತೋಷದಿಂದ ಇದ್ದಾರೆ ಎಂಬುದು ಮುಖ್ಯ. ಇನ್ನು ಮುಂದೆಯಾದರೂ ಅಭ್ಯಾಸವನ್ನ ಮಾಡಿಕೊಳ್ಳೋಣ. ಏಳುವಾಗ ಒಂದು ನಗುಮುಖದಿಂದ ಎದ್ದೇಳುವ ಪ್ರಯತ್ನವನ್ನು ಮಾಡೋಣ. ನಗುಮುಖ ವಿರಲಿಲ್ಲವೆಂದರೆ ಮತ್ತೆ ಮಲಗಿಕೊಂಡು ನಂತರ ಎಚ್ಚರವಾದರೆ ಮುಖದಲ್ಲಿ ನಗುವಿನಿಂದ ಆ ದಿನದ ಜೀವನವನ್ನು ಆರಂಭಿಸೋಣ. ಪ್ರತಿನಿತ್ಯ ಪ್ರಯತ್ನ ಮಾಡುತ್ತಿದ್ದರೆ ಖಂಡಿತ ಹಾಸಿಗೆಯಿಂದ ಎದ್ದಾಗ ನಗುಮುಖದಿಂದ ಇದ್ದರೆ ಎಲ್ಲಾ ಕಷ್ಟ ಕಾರ್ಪಣ್ಯಗಳು ನೋವುಗಳು ಕೆಲವೇ ದಿನಗಳಲ್ಲಿ ಕಡಿಮೆಯಾಗುವುದರಲ್ಲಿ ಅನುಮಾನವಿಲ್ಲ.

ನಗುವಿನಿಂದ ಇಷ್ಟೆಲ್ಲ ಉಪಯೋಗ ಪರಿಹಾರ ಇದೆಯೇ ಎಂದು ಕೇಳಬಹುದು. ಖಂಡಿತ ಇದೆ. ಒಂದು ನಡೆದ ಘಟನೆ ಹೇಳುತ್ತೇನೆ ಕೇಳಿ. ಅವನ ಹೆಸರು ನಾರ್ಮನ್ಸ್ ಎಂಬ ವ್ಯಕ್ತಿಗೆ ಡಾಕ್ಟರ್ ಹೇಳುತ್ತಾರೆ. ನೀವು ಬದುಕುವುದು ಇನ್ನೂ ಕೇವಲ ಆರು ತಿಂಗಳು ಮಾತ್ರವೆಂದು ನಿಮ್ಮ ದೇಹದ ಆರೋಗ್ಯ ಬಹಳಷ್ಟು ಅಡಗಿಟ್ಟಿದೆ. ಉಳಿದಿರುವ ಸಮಯದಲ್ಲಿ ನಿಮ್ಮ ಆಸೆ ಆಕಾಂಕ್ಷೆಗಳು ಏನಾದರೂ ಇದ್ದರೆ ಈಡೇರಿಸಿಕೊಳ್ಳಿ ಎನ್ನುತ್ತಾರೆ. ನಾವ್ಯಾರಾದರು ಆಗಿದ್ದರೆ ಯೋಚನೆ ಮಾಡಿಯೇ ಮೂರು ತಿಂಗಳಲ್ಲಿ ಸಾಯುತ್ತಿದ್ದೆವು. ಅವರು ಹಾಗೆ ಮಾಡಲಿಲ್ಲ ಮನೆಗೆ ಬಂದು ಹಾಸ್ಯದ ಸಿನಿಮಾ ನಾಟಕ ಮತ್ತು ಏಕಪಾತ್ರ ಅಭಿನಯ ನೋಡಿಕೊಂಡು ಕಾಲ



ಕಳೆಯುತ್ತಾ ತಾವು ನಗುತ್ತಾ ಇರುತ್ತಿದ್ದರು. ಅನಂತರ ನಾನಷ್ಟೇ ನಕ್ಕರೆ ಆಗುವುದಿಲ್ಲ ಎಂದು ಹತ್ತಿರದ ಪಾರ್ಕ್‌ನಲ್ಲಿ ಹತ್ತಾರು ಜನರನ್ನು ಕೂರಿಸಿಕೊಂಡು ಅಭಿನಯ ಮಾಡುತ್ತಾ ನಗಿಸುತ್ತ ನಗುತ್ತಾ ಸಮಯ ಕಳೆಯುತ್ತಾ ಬಂದರು. ನಂತರದಲ್ಲಿ ಡಾಕ್ಟರ್ ಹೇಳಿದಂತೆ ಅವರು ಆರು ತಿಂಗಳಲ್ಲಿ ಸಾಯಲಿಲ್ಲ. ಇಪ್ಪತ್ತು ವರ್ಷಗಳ ಕಾಲ ಜೀವಿಸಿದ್ದರು.

ವಿಶೇಷವೆಂದರೆ ಡಾಕ್ಟರ್ ತಿಳಿಸಿದ್ದ ರೋಗದಿಂದ ಅವರು ಮರಣ ಹೊಂದಿರಲಿಲ್ಲ. ಬೇರೆ ಇನ್ನೊಂದು ಕಾಯಿಲೆಯಿಂದ ಸಾವನಪ್ಪಿದ್ದರು. ಮೇಲಿನ ಕಥೆಯಿಂದ ತಿಳಿದುಕೊಳ್ಳುವುದೇನೆಂದರೆ ಆಯಸ್ಸು ಮತ್ತು ಆರೋಗ್ಯವನ್ನು ನಗುತ್ತಿದ್ದರೆ ಹೆಚ್ಚಿಸಿಕೊಳ್ಳಬಹುದೆಂದು.

ಎಷ್ಟು ವರ್ಷಗಳ ಕಾಲ ನಾವುಗಳು ಜೀವಿಸಿದ್ದೀವಿ ಎನ್ನುವುದಕ್ಕಿಂತ ಎಷ್ಟು ದಿನ ನಗುತ್ತಾ ಇನ್ನೊಬ್ಬರನ್ನು ನಗಿಸುತ್ತಾ ಬದುಕಿದ್ದೇವೆ ಎಂಬುದು ಮುಖ್ಯವಾಗುತ್ತದೆ. ರಾತ್ರಿ ಮಲಗುವಾಗ ಹಾಸಿಗೆ ಮೇಲೆ ಯೋಚಿಸಬೇಕು. ಈ ದಿನ ಒಮ್ಮೆಯಾದರೂ ನಕ್ಕಿದ್ದೀನಾ ಅಥವಾ ಇನ್ನೊಬ್ಬರನ್ನು ನಗಿಸಿದ್ದೀನಾ ಎಂದು ಆಲೋಚಿಸಿದರೆ ಬದುಕು ಖಂಡಿತ ಬದಲಾಗುತ್ತದೆ. ಬಸವಣ್ಣನವರು ಹೇಳಿದಂತೆ ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ ದೇವಲೋಕ ಮೃತ್ಯ ಲೋಕ ಬೇರಿಲ್ಲ ಕಾಣಿರೋ ಎಂಬುದನ್ನು ಅರಿತು ಇಲ್ಲಿಯೇ ಸ್ವರ್ಗವನ್ನು ಸೃಷ್ಟಿಸಿಕೊಳ್ಳುವ ಅವಕಾಶಕ್ಕೆ ನಗುವೆ ಮೊದಲ ಮೆಟ್ಟಿಲು. ಈ ವಿಚಾರದಲ್ಲಿ ನನಗೆ ತೃಪ್ತಿ ಇದೆ. ನಮ್ಮ ಆರೋಗ್ಯಕ್ಕಾಗಿ ಯೋಗ ಶಿಬಿರದಲ್ಲಿ ಬರುವ ನೂರಾರು ಶಿಬಿರಾರ್ಥಿಗಳನ್ನು ದಿನನಿತ್ಯ ಒಂದೊಂದು ಹಾಸ್ಯದ ಚಟಾಕಿಗಳನ್ನು ಹೇಳುತ್ತಾ ಅವರ ಮುಖದಲ್ಲಿ ನಗುವನ್ನು ನೋಡುವುದೇ ಒಂದು ಚೆಂದ ದೇವರನ್ನು ನೋಡಿದಂತೆ ಆಗುತ್ತದೆ.

ಇಪ್ಪತ್ತೆರಡು ವರ್ಷಗಳಿಂದ ನಿರಂತರವಾಗಿ ಶಿಬಿರಗಳಲ್ಲಿ ಭಾಗವಹಿಸಿದ ಲಕ್ಷಾಂತರ ಜನರನ್ನು ಆ ಕ್ಷಣದಲ್ಲಿ ನಗಿಸಿದ ಜೊತೆಗೆ ನಕ್ಕ ತೃಪ್ತಿ ಇದೆ ಇದಕ್ಕಿಂತ ಇನ್ನೇನು ಮಾಡಲಾಗುತ್ತದೆ. ನೀವೇ ಹೇಳಿ ಇಷ್ಟು ಓದಿದ ಮೇಲು ನಿಮಗೊಂದು ಹಾಸ್ಯ ಹೇಳಲಿಲ್ಲವೆಂದರೆ ಹೇಗೆ?

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248